# ಕರ್ನಾಟಕ ಸರ್ಕಾರ

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ,


ಮಲ್ಲೇಶ್ವರಂ 6ನೇ ಅಡ್ಡರಸ್ತೆ, ಬೆಂಗಳೂರು-560003

Email Id: adpiqsection@gmail.com Phone No: 080-23460525


ಸಂಖ್ಯೆ: ಕ್ಯೂ2/ಡಿಪಿಎಸ್‌ಇ/ಪೂ.ಪರೀಕ್ಷೆ/ಜನವರಿ-2021/50/2020-21 ದಿನಾಂಕ:31.12.2020

## ಅಧಿಸೂಚನೆ

ವಿಷಯ:- ಜನವರಿ-2021ರ ಮಾಹೆಯಲ್ಲಿ ನಡೆಯಲಿರುವ ಪ್ರಥಮ ಡಿಪಿಎಸ್‌ಇ ಪೂರಕ ಪರೀಕ್ಷೆಗೆ ಪರೀಕ್ಷಾ ಅರ್ಜಿಗಳನ್ನು ಆಹ್ವಾನಿಸಿರುವ ಬಗ್ಗೆ.

ಉಲ್ಲೇಖ: 1. ದಿನಾಂಕ: 18.05.2020ರಂದು ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ಬೆಂಗಳೂರು, ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿನ ತೀರ್ಮಾನ.
2. ಮಾನ್ಯ ಆಯುಕ್ತರು, ಸಾ.ಶಿ.ಇಲಾಖೆ ರವರು ಅನುಮೋದನೆ.
3. ನಿರ್ದೇಶಕರು, ಡಿಎಸ್‌ಇಆರ್‌ಟಿ,ಬೆಂಗಳೂರು ರವರ ಸಭಾ ನಡವಳಿದಿನಾಂಕ:28.08.2020

************

2020-21ನೇ ಸಾಲಿನ ಡಿಪಿಎಸ್‌ಇ ಪುನರಾವರ್ತಿತ ವಿದ್ಯಾರ್ಥಿಗಳಿಗೆ ಲಿಖಿತ (ಥಿಯರಿ) ಪೂರಕ ಪರೀಕ್ಷೆಯನ್ನು ದಿನಾಂಕ:27.01.2021 ರಿಂದ ದಿನಾಂಕ:29.01.2021 ರವರೆಗೆ ನಡೆಸಲು ತೀರ್ಮಾನಿಸಲಾಗಿದೆ. ಡಿಸೆಂಬರ್ 2020ರಲ್ಲಿ ನಡೆದ ಡಿ.ಪಿ.ಎಸ್.ಇ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಅಭ್ಯರ್ಥಿಗಳಿಗೆ Online ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಪರೀಕ್ಷಾ ವೇಳಾಪಟ್ಟಿಯನ್ನು ಇದರೊಂದಿಗೆ ಲಗತ್ತಿಸಿದೆ.

ಸರ್ಕಾರಿ ಶಿಕ್ಷಕರ/ಶಿಕ್ಷಕಿಯರ ತರಬೇತಿ ಸಂಸ್ಥೆಯ ಮುಖ್ಯಸ್ಥರು ತಮ್ಮ ಸಂಸ್ಥೆಯಿಂದ ಹಾಜರಾಗುವ ಅನುತ್ತೀರ್ಣ ವಿದ್ಯಾರ್ಥಿಗಳ ವಿವರಗಳನ್ನು ಮಂಡಳಿಯ www.kseeb.kar.nic.in ಜಾಲತಾಣದಲ್ಲಿ Login/Other Exams/DPSE Examination ನಲ್ಲಿ Institute Login ಮೂಲಕ Upload ಮಾಡಲು ಸೂಚಿಸಿದೆ.

2. ಪರೀಕ್ಷಾ ಶುಲ್ಕದ ವಿವರ:-

| ಕ್ರಮ ಸಂಖ್ಯೆ | ಪರೀಕ್ಷೆ | ಒಟ್ಟು ಶುಲ್ಕ |
|---|---|---|
| 01 | ಒಂದು ವಿಷಯಕ್ಕೆ | 300-00 |
| 02 | ಎರಡು ವಿಷಯಗಳಿಗೆ | 600-00 |
| 03 | ಮೂರು ಅಥವಾ ಮೂರಕ್ಕಿಂತ ಹೆಚ್ಚು ವಿಷಯಗಳಿಗೆ | 1080-00 |

**(ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ/ಪ್ರವರ್ಗ1 ಅಭ್ಯರ್ಥಿಗಳಿಗೆ ಪರೀಕ್ಷಾ ಶುಲ್ಕ ವಿನಾಯಿತಿ ಇದೆ)**

## 3. ಪರೀಕ್ಷಾ ಶುಲ್ಕ ಪಾವತಿಸುವ ವಿಧಾನ

- ಅಭ್ಯರ್ಥಿಗಳ ಪರೀಕ್ಷಾ ಅರ್ಜಿಯನ್ನು ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು ಮಂಡಳಿಯ ಜಾಲತಾಣದಲ್ಲಿ, ತಮ್ಮ ಸಂಸ್ಥೆಯ Login ಮೂಲಕ Upload ಮಾಡಬೇಕು. ನಿಗದಿಪಡಿಸಿದ ಅವಧಿಯೊಳಗೆ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಪೂರ್ಣಗೊಂಡ ನಂತರ ಸಂಸ್ಥೆವಾರು ಪರೀಕ್ಷಾ ಶುಲ್ಕ ಪಾವತಿಗೆ ಸಂಬಂಧಪಟ್ಟಂತೆ ಆನ್‌ಲೈನ್‌ನಲ್ಲಿ ಚಲನ್ ಜನರೇಟ್ ಮಾಡುವ ವ್ಯವಸ್ಥೆ ಮಾಡಲಾಗಿದೆ. ಸದರಿ ಚಲನ್ ಅನ್ನು Login ನಿಂದ ಡೌನ್‌ಲೋಡ್ ಮಾಡಿಕೊಂಡು ಅದರಲ್ಲಿ ನಮೂದಿಸಿರುವ ಮೊತ್ತವನ್ನು ಅದೇ ಚಲನ್ ಬಳಸಿ ನಿಗದಿತ ಅವಧಿಯಲ್ಲಿ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಪಾವತಿಸುವುದು.
- ಆನ್‌ಲೈನ್ ಚಲನ್ ಹೊರತುಪಡಿಸಿ ಮತ್ತ್ಯಾವುದೇ ಚಲನ್, ಡಿ.ಡಿ, ಚೆಕ್ ಮೂಲಕ ಮಾಡಲಾದ ಪಾವತಿಗಳನ್ನು ಮಾನ್ಯ ಮಾಡಲಾಗುವುದಿಲ್ಲ. ವಿದ್ಯಾರ್ಥಿಗಳ ಶುಲ್ಕವನ್ನು ನಿಗದಿತ ದಿನಾಂಕದ ನಂತರ ಚಲನ್ ಮೂಲಕ ಪಾವತಿಸಿದಲ್ಲಿ ಅರ್ಜಿಗಳನ್ನು ಪರಿಗಣಿಸುವುದಿಲ್ಲ ಹಾಗೂ ಪರೀಕ್ಷಾ ಶುಲ್ಕವನ್ನು ಪಾವತಿಸಿದ್ದರೂ ಸಹ ಹಿಂದಿರುಗಿಸಲಾಗುವುದಿಲ್ಲ.
- ಪರೀಕ್ಷಾ ಶುಲ್ಕವನ್ನು ಆನ್‌ಲೈನ್ ಮೂಲಕ ಪಾವತಿಸುವ ವ್ಯವಸ್ಥೆ ಮಾಡಲಾಗಿದ್ದು, ಆನ್‌ಲೈನ್ ಮೂಲಕ ಪಾವತಿಸಿದಲ್ಲಿ ಪಾವತಿಸಿರುವ ಬಗ್ಗೆ ಆನ್‌ಲೈನ್ ರಶೀದಿಯ ಪ್ರತಿಯನ್ನು ಅರ್ಜಿಯ ಜೊತೆಯಲ್ಲಿ ಸಲ್ಲಿಸಬೇಕು.
- **ಮಂಡಳಿ ನಿಗದಿಪಡಿಸಿದ ಕೊನೆಯ ದಿನಾಂಕಗಳು ಸರ್ಕಾರಿ ರಜಾ ದಿನವೆಂದು ಘೋಷಿಸಿದ್ದಲ್ಲಿ ಆ ದಿನದ ಮಾರನೆಯ ಕೆಲಸದ ದಿನವನ್ನು ಕೊನೆಯ ದಿನವೆಂದು ಪರಿಗಣಿಸಲಾಗುವುದು.**

## 4.ಅರ್ಜಿಗಳನ್ನು ಸಲ್ಲಿಸಲು ನಿಗದಿಗೊಳಿಸಿರುವ ದಿನಾಂಕಗಳ ವಿವರ.

| ಕ್ರಸಂ | ವಿವರ | ದಿನಾಂಕ: |
|---|---|---|
| 1 | ಅಧಿಸೂಚನೆ ಪ್ರಕಟಿಸುವ ದಿನಾಂಕ | 01/01/2021 |
| 2 | ಅರ್ಜಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಪ್ರಾರಂಭ ದಿನಾಂಕ | 02/01/2021 |
| 3 | ಅರ್ಜಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ | 09/01/2021 |
| 4 | ದಂಡ ಶುಲ್ಕದೊಂದಿಗೆ ಪರೀಕ್ಷಾ ಶುಲ್ಕ (ದಿನ ಒಂದಕ್ಕೆ ರೂ.150/-ರಂತೆ) ಪಾವತಿಸಲು ಕೊನೆಯ ದಿನಾಂಕ | 13/01/2021 |
| 5 | ಜನವರಿ-2021 ರ ಡಿಪಿಎಸ್‌ಇ ಪೂರಕ ಪರೀಕ್ಷೆಗೆ ಆನ್‌ಲೈನ್ ಚಲನ್ ಡೌನ್‌ಲೋಡ್ ಮಾಡಿಕೊಂಡು ಪರೀಕ್ಷಾ ಶುಲ್ಕ ಪಾವತಿಸಲು ಕೊನೆಯ ದಿನಾಂಕ | 14/01/2021 |
| 6 | ನಾಮಿನಲ್ ರೋಲ್, ಶುಲ್ಕ ಪಾವತಿಸಿದ ಮೂಲ ಚಲನ್ ಪ್ರತಿ ಹಾಗೂ ಸಂಭಂಧಿಸಿದ ಇತರೆ ದಾಖಲೆಗಳನ್ನು ಸಂಸ್ಥೆಗಳಿಂದ ಡಯಟ್‌ಗೆ ಸಲ್ಲಿಸಲು ಕೊನೆಯ ದಿನಾಂಕ | 16/01/2021 |
| 7 | ಡಯಟ್‌ನಿಂದ ಅರ್ಜಿಗಳನ್ನು ಅನುಮೋದಿಸಲು ಕೊನೆಯ ದಿನಾಂಕ | 18/01/2021 |
| 8 | ಪ್ರವೇಶ ಪತ್ರ ಗಳನ್ನು ಆನ್‌ಲೈನ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ | 20/01/2021 |
| 9 | ಪರೀಕ್ಷಾ ಕೇಂದ್ರದ ಮುಖ್ಯಸ್ಥರು ಎ.ಎಂ.ಎಲ್ ಮತ್ತು ಸಿಎನ್‌ಆರ್ ಮತ್ತು ನಾಮಿನಲ್‌ರೋಲ್‌ಗಳನ್ನು ಆನ್‌ಲೈನ್‌ಅಲ್ಲಿ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ | 22/01/2021 |

## 5. ಅರ್ಜಿಗಳನ್ನು ಸಲ್ಲಿಸಲು ಸಂಸ್ಥೆಯ ಮುಖ್ಯಸ್ಥರು ಪಾಲಿಸಬೇಕಾದ ಸೂಚನೆಗಳು:

1 ಜನವರಿ-2021 ಡಿಪಿಎಸ್‌ಇ ಪೂರಕ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳ ನೊಂದಣಿ ಮಾಹಿತಿಯನ್ನು ಮಂಡಳಿಯ ಜಾಲತಾಣದಲ್ಲಿ Login/Other Exams/DPSE Examination ನಲ್ಲಿ Login ಮೂಲಕ Upload ಮಾಡಲು ಸೂಚಿಸಿದೆ.

2 ಪತ್ರ ವ್ಯವಹಾರಕ್ಕೆ ಅನುಕೂಲಕರವಾದ ಅಂಚೆ ವಿಳಾಸ, ದೂರವಾಣಿ ಸಂಖ್ಯೆ ಅಥವಾ ಮೊಬೈಲ್ ಫೋನ್ ಸಂಖ್ಯೆ ಹಾಗೂ E-Mail ವಿಳಾಸ ತಪ್ಪದೆ ನಮೂದಿಸುವುದು.

3 ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ/ಪ್ರವರ್ಗ-1ರ ಅಭ್ಯರ್ಥಿಗಳಿಗೆ ಶುಲ್ಕ ವಿನಾಯಿತಿ ಇದೆ. ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಶುಲ್ಕ ವಿನಾಯಿತಿ ಬಯಸಿದ್ದಲ್ಲಿ ಜಾತಿ ಪ್ರಮಾಣ ಪತ್ರದ RD ಸಂಖ್ಯೆಯನ್ನು ಕಡ್ಡಾಯವಾಗಿ ಆನ್‌ಲೈನ್ ಅರ್ಜಿಯಲ್ಲಿ ನಮೂದಿಸಬೇಕು. ಹಾಗೂ /ಪ್ರವರ್ಗ1 ಅಭ್ಯರ್ಥಿಗಳು ಶುಲ್ಕ ವಿನಾಯಿತಿ ಬಯಸಿದ್ದಲ್ಲಿ ರೂ. 1.00 ಲಕ್ಷದವರೆಗಿನ ಆದಾಯಮಿತಿ ಹೊಂದಿರಬೇಕು. ಅದಕ್ಕೆ ಸಂಬಂಧಿಸಿದ ಜಾತಿ ಮತ್ತು ಆದಾಯ ಪ್ರಮಾಣಪತ್ರದ RD ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಬೇಕು.

4 ಸಂಸ್ಥೆಯ ಮುಖ್ಯಸ್ಥರು ಸಂಸ್ಥೆಯ ಲಾಗಿನ್‌ನಲ್ಲಿ ನಾಮಯಾದಿ ಪಟ್ಟಿಯನ್ನು (Nominal Roll) Down load ಮಾಡಿಕೊಂಡು ಪರಿಶೀಲಿಸಿ ಶುಲ್ಕ ಪಾವತಿಸಿದ ಮೂಲ ಚಲನ್‌ನೊಂದಿಗೆ ಡಯಟ್‌ಗೆ ಸಲ್ಲಿಸುವುದು.

5 ಮೇಲಿನ ಎಲ್ಲಾ ನಿಯಮಗಳನ್ನು ಸಂಬಂಧಪಟ್ಟ ಡಿಪಿಎಸ್‌ಇ ಸಂಸ್ಥೆಯ ಮುಖ್ಯಸ್ಥರು ತಪ್ಪದೇ ಪಾಲಿಸಲು ತಿಳಿಸಿದೆ. ನಿಯಮಗಳನ್ನು ಪಾಲಿಸದಿದ್ದಲ್ಲಿ ಮುಂದಿನ ಆಗುಹೋಗುಗಳಿಗೆ ಸಂಸ್ಥೆಯ ಮುಖ್ಯಸ್ಥರನ್ನೇ ಜವಾಬ್ದಾರರನ್ನಾಗಿ ಮಾಡಲಾಗುವುದು.

**6. ವಿಭಿನ್ನ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳಿಗೆ ಬರಹಗಾರರ ಮತ್ತು ಹೆಚ್ಚಿನ ಕಾಲಾವಕಾಶ ನೀಡುವ ಬಗ್ಗೆ:-**

ವಿಭಿನ್ನ ಸಾಮರ್ಥ್ಯವುಳ್ಳ (Differently Abled) ವಿಕಲಚೇತನ ವಿದ್ಯಾರ್ಥಿಗಳಿಗೆ ಸರ್ಕಾರದ ಪತ್ರ ಸಂಖ್ಯೆ:ಇಡಿ98/ಇಎಸ್‌ಡಬ್ಲ್ಯೂ2009 ದಿನಾಂಕ:10.06.2009ರಲ್ಲಿ ಸರ್ಕಾರವು ವಿಧಿಸಿರುವ ಷರತ್ತುಗಳನ್ವಯ ಅಂಗವೈಕಲ್ಯತೆ ಹೊಂದಿರುವ ವಿದ್ಯಾರ್ಥಿಗಳಿಗೆ ಹೆಚ್ಚಿನ ಕಾಲಾವಕಾಶ ಮತ್ತು ಬರಹಗಾರರ ಸೌಲಭ್ಯಗಳನ್ನು ನೀಡುವ ಬಗ್ಗೆ ಜಿಲ್ಲಾ ಡಯಟ್ ಪ್ರಾಂಶುಪಾಲರ ಹಂತದಲ್ಲಿ ಕ್ರಮಕೈಗೊಳ್ಳುವುದು. ಸರ್ಕಾರಿ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸುವುದು. ಯಾವುದೇ ವ್ಯತ್ಯಾಸವಾದಲ್ಲಿ ಜಿಲ್ಲಾ ಡಯಟ್ ಪ್ರಾಂಶುಪಾಲರನ್ನು ನೇರಹೊಣೆಗಾರರನ್ನಾಗಿ ಮಾಡಲಾಗುವುದು.

**7. ಪ್ರಥಮ ಡಿಪಿಎಸ್‌ಇ ಪಠ್ಯಕ್ರಮದನ್ವಯ ಬಾಹ್ಯ ಪರೀಕ್ಷೆಗೆ ವಿಷಯಗಳ ವಿವರ ನಿಗಧಿಪಡಿಸಲಾಗಿರುವ ಗರಿಷ್ಠ ಅಂಕಗಳು ಹಾಗೂ ನಿಗಧಿಪಡಿಸಿರುವ ಅವಧಿ**

| ವಿಷಯ | ವಿಷಯ ಸಂಕೇತ ಮತ್ತು ಪಠ್ಯವಸ್ತು | ಗರಿಷ್ಠ ಅಂಕಗಳು | ನಿಗಧಿಪಡಿಸಲಾದ ಅವಧಿ |
|---|---|---|---|
| Foundations of ECE | 1001 X | 100 | 3 ಘಂಟೆ |
| Psychology of child development | 1002 X | 100 | 3 ಘಂಟೆ |
| Methods and Strategies of ECE | 1003 X | 100 | 3 ಘಂಟೆ |

- ಡಯಟ್ ಪ್ರಾಂಶುಪಾಲರು ತಮ್ಮ ಜಿಲ್ಲೆಯಲ್ಲಿರುವ ಡಿಪಿಎಸ್‌ಇ ಕಾಲೇಜುಗಳು ಸಲ್ಲಿಸಿರುವ ನಾಮಯಾದಿ ಪಟ್ಟಿಯನ್ನು ತಮ್ಮ ಹಂತದಲ್ಲಿ ರಕ್ಷಿಸಿಡುವುದು ಹಾಗೂ ಮಂಡಳಿಯಿಂದ ಕೇಳಿದಾಗ ಅದನ್ನು ಮಂಡಳಿಗೆ ಸಲ್ಲಿಸುವುದು.
- ಡಯಟ್ ಹಂತದಲ್ಲಿ ಶಿಕ್ಷಕರ ತರಬೇತಿ ಸಂಸ್ಥೆಗಳಿಂದ ಪರೀಕ್ಷಾ ಶುಲ್ಕದ ಚಲನ್ ಪರಿಶೀಲಿಸಿ ಮಂಡಳಿಗೆ ಕಳುಹಿಸುವುದು.
- ಅರ್ಜಿ ಸಲ್ಲಿಕೆ ಮುಕ್ತಾಯವಾದ ನಂತರ ಮಂಡಳಿಯ ಹಂತದಲ್ಲಿ ಪರಿಶಿಲಿಸಿ ಸಂಸ್ಥೆಯ Loginಗೆ ಅಭ್ಯರ್ಥಿಗಳ ಪ್ರವೇಶ ಪತ್ರಗಳನ್ನು Upload ಮಾಡಲಾಗುವುದು.

ಡಿಸೆಂಬರ್ 2020ರ ಪರೀಕ್ಷೆಯ ಅನುತ್ತೀರ್ಣ ಅಭ್ಯರ್ಥಿಗಳು, ಉತ್ತರಪತ್ರಿಕೆ ಮರುಮೌಲ್ಯಮಾಪನಕ್ಕಾಗಿ ಅರ್ಜಿ ಸಲ್ಲಿಸಿದಲ್ಲಿ ಫಲಿತಾಂಶಕ್ಕೆ ನಿರೀಕ್ಷಿಸದೇ ಪೂರಕ ಪರೀಕ್ಷೆಗೆ ಅರ್ಜಿಯನ್ನು ಸಲ್ಲಿಸುವುದು.

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಗಮನಿಸಿ ಡಯಟ್ ಪ್ರಾಂಶುಪಾಲರು ಹಾಗೂ ಸಂಸ್ಥೆಯ ಮುಖ್ಯಸ್ಥರು ಅಗತ್ಯ ಕ್ರಮವಹಿಸಲು ತಿಳಿಸಿದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ವಿವರ

**1.ಶ್ರೀಮತಿ, ಟಿ.ಡಿ.ಶೈಲ ಸಹಾಯಕ ನಿರ್ದೇಶಕರು, ಡಿಇಡಿ ಶಾಖೆ, ಮೊಬೈಲ್ ಸಂಖ್ಯೆ:9480343741**

**2.ಶ್ರೀ, ರಿಯಾಜ್, ಸಹಾಯಕ ನಿರ್ದೇಶಕರು, ಗಣಕಶಾಖೆ ಮೊಬೈಲ್ ಸಂಖ್ಯೆ:7892195954**

1/1/2021

**(ಎಸ್.ಗೀತಾ)**
**ನಿರ್ದೇಶಕರು**
**(ಇತರೆ ಪರೀಕ್ಷೆಗಳು)**
**ಕ.ಪ್ರೌ.ಶಿ.ಪ.ಮಂಡಳಿ, ಬೆಂಗಳೂರು**

ಪ್ರತಿಗಳು :-

1. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
2. ನಿರ್ದೇಶಕರು (ಇ.ಪ) ರವರ ಹಾಗೂ ಕಾರ್ಯದರ್ಶಿಗಳು ಆಪ್ತ ಶಾಖೆಗೆ.
3. ರಾಜ್ಯದ ವಿಭಾಗೀಯ ಮಟ್ಟದ ಪ್ರಾದೇಶಿಕ ಪರೀಕ್ಷಾ ಮಂಡಳಿಯ ಕಾರ್ಯದರ್ಶಿಗಳಿಗೆ ಬೆಂಗಳೂರು, ಮೈಸೂರು, ಚಿತ್ರದುರ್ಗ, ಕಲ್ಬುರ್ಗಿ ಮತ್ತು ಬೆಳಗಾಂ ವಿಭಾಗರವರಿಗೆ ಮುಂದಿನ ಕ್ರಮಕ್ಕಾಗಿ.
4. ಕಲಬುರಗಿ ಮತ್ತು ಚಿತ್ರದುರ್ಗ ಡಯಟ್ ಪ್ರಾಂಶುಪಾಲರುಗಳಿಗೆ ಮುಂದಿನ ಕ್ರಮಕ್ಕಾಗಿ.
5. ಶಾಖಾಧಿಕಾರಿಗಳು ಕಂಪ್ಯೂಟರ್ ಶಾಖೆಯವರಿಗೆ ಸಂಬಂಧಪಟ್ಟ ಅಧಿಸೂಚನೆಯನ್ನು ವೆಬ್ ಸೈಟ್‌ನಲ್ಲಿ ಅಳವಡಿಸಲು ಸಲ್ಲಿಸಿದೆ.
6. ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರಿಗೆ ಸೂಕ್ತ ಕ್ರಮಕ್ಕಾಗಿ.
7. ಕಛೇರಿ ಪ್ರತಿ.